# ನನ್ನ ಶಾಲೆಯ ಸೋಪಾನ

**ಅಂಕಿತ ಕೊಡವೂರ್**




ವಿದ್ಯಾ ನಿಕೇತನ ಶಾಲೆಯ ಕೈಬೀಸಿ ಕರೆಯುತಿದ್ದ ದ್ವಾರಗಳತ್ತ ನಾನು ದಿಟ್ಟಿಸಿ ನೋಡಿದೆ. ನನ್ನ ಬದುಕಿನಲ್ಲಿ ಹೊಸದಾಗಿ ನಾನೇರುತ್ತಿರುವ ಈ ಮೆಟ್ಟಿಲು ನನಗೆ ಏನನ್ನು ನೀಡಬಹುದೆಂಬ ಅಳುಕಿನಿಂದಲೇ ಬಹಳ ಜಾಗರೂಕತೆಯಿಂದ ಹೆಜ್ಜೆಯಿರಿಸಿದೆ. ಅಷ್ಟರಲ್ಲಿ ಪುಟ್ಟ ಹುಡುಗಿಯೊಬ್ಬಳು ಬಂದು ನನ್ನ ಕೈಯನ್ನು ಕುಲುಕಿದಳು ಮತ್ತು ನಗುನಗುತ್ತಾ "ಗುಡ್ ಮಾರ್ನಿಂಗ್" ಎಂದು ನನ್ನನ್ನು ಸ್ವಾಗತಿಸಿದಳು. ಅದೇ ಉತ್ಸಾಹದಲ್ಲಿ ಆಕೆಯು ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಸ್ವಾಗತಿಸುತ್ತಾ ಮುಂದುವರೆದಳು. ಇದನ್ನು ಕಂಡು ನನಗೆ ಸಂತೋಷವೂ ಆಯಿತು ಮತ್ತು ಆಶ್ಚರ್ಯವೂ ಆಯಿತು, ಬಳಿಕ ನನಗೆ ತಿಳಿಯಿತು ಇದು ವಿದ್ಯಾ ನಿಕೇತನದ ಒಂದು ಸತ್ಪರಂಪರೆಯೆಂದು.

ನಾನು ಹೊಸಬಳಾಗಿದ್ದರೂ, ಇಲ್ಲಿಯ ತಿಳಿ ಹಳದಿ ಬಣ್ಣದ ಗೋಡೆಗಳಿಂದ ಹಿಡಿದು ನಗುನಗುತ್ತಾ ಬೆರೆಯುವ ಜನರವರೆಗೆ ಆತ್ಮೀಯತೆಯ ಭಾವನೆಗಳು ನನ್ನನ್ನು ಆವರಿಸಿದವು. ಎಲ್ಲೆಲ್ಲೂ ಆಶಾವಾದ ಸೂಸುತಿತ್ತು. ನನ್ನ ಶಾಲಾ ವಿದ್ಯಾಭ್ಯಾಸದ ಕೊನೆಯ ವರ್ಷಗಳನ್ನು ಕಳೆಯಲು ಇದಕ್ಕಿಂತ ಉತ್ತಮ ಪರಿಸರ ಬೇಕೇ? ಇದೇನೋ ಶಿಸ್ತಿನ ಶಾಲೆಯೇ, ಆದರೆ ಒಬ್ಬ ವಿದ್ಯಾರ್ಥಿಯ ನೈಜ ಸಾಮರ್ಥ್ಯಗಳನ್ನು ಅತಿಯಾಗಿ ನಿರ್ಬಂಧಿಸದೆ ಅಥವಾ ನಿಗ್ರಹಿಸದೆ ಅದು ಶಿಸ್ತನ್ನು ನಿರ್ವಹಿಸುತ್ತದೆ. ಇಲ್ಲಿ ವಿಚಾರಗಳು ಮುಕ್ತವಾಗಿ ಹರಿಯುತ್ತವೆ, ಆದರೆ ಎಂದೂ ಹತೋಟಿ ಮೀರಿ ಹೋಗುವುದಿಲ್ಲ.

ತರಗತಿಯಲ್ಲಿ ಸ್ಮಾರ್ಟ್‌ಬೋರ್ಡ್‌ಗಳ ಬಳಕೆಯು ಒಂದು ಸ್ವಾಗತಾರ್ಹ ಬದಲಾವಣೆಯಾಗಿತ್ತು. ಈ ಹಲಗೆಗಳು ತರಗತಿಯಲ್ಲಿ ವಿವಿಧ ಬಗೆಯ ಚಟುವಟಿಕೆಗಳಿಗೆ ಅವಕಾಶ ನೀಡುತ್ತಿದ್ದವು. ಹೌದು, ಪಠ್ಯಪುಸ್ತಕಗಳನ್ನು ಬಿಟ್ಟರೆ ಉತ್ತಮ ಮಾರ್ಗವಿಲ್ಲ ಎಂಬುದು ಹೆಚ್ಚಿನವರು ಒಪ್ಪಿರುವ ಮಾತೇ, ಆದರೆ ಬಹಳ ಸಲ ಪಠ್ಯ ಪುಸ್ತಕಗಳನ್ನೂ ದಾಟಿಹೋಗದೇ ನಾವು ನೀರಸ ಮತ್ತು ನಿರ್ಬಂಧಿತ ಜಗತ್ತಿನಲ್ಲಿ ಸಿಲುಕಿ ಹೋಗುತ್ತವೆ. ಇಲ್ಲಿನ ನಮ್ಮ ಶಿಕ್ಷಕರ ತೆರೆದ ಮನಸ್ಸು ಸ್ಫೂರ್ತಿದಾಯಕವಾಗಿದ್ದು ಮತ್ತು ಅನೇಕ ವೇಳೆ ಅವುಗಳು ತರಗತಿಯಲ್ಲಿ ಆರೋಗ್ಯಪೂರ್ಣ ಚರ್ಚೆಯನ್ನು ಪ್ರಚೋದಿಸುತ್ತದೆ. ಹೋಲಿಕೆಯಲ್ಲಿ ಕಡಿಮೆ ವಿದ್ಯಾರ್ಥಿಗಳಿದ್ದ ತರಗತಿಯಾದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಗೂ ತನ್ನ ಅಭಿಪ್ರಾಯವನ್ನು ತಿಳಿಸಲು ಅವಕಾಶ ದೊರೆಯುತ್ತದೆ.

"ಆಟವಿಲ್ಲ ಕೂಟವಿಲ್ಲ ಓದಿ ಓದಿ ಮರುಳಾದ ಕೂಚಂಭಟ್ಟ" ಎಂಬುದು ಒಂದು ಸವಕಲು ಗಾದೆಯಾಗಿದ್ದರೂ ಅದನ್ನೆ ಮತ್ತೆ ಹೇಳಬೇಕಾಗಿದೆ. ವಿದ್ಯಾ ನಿಕೇತನದಲ್ಲಿ ಓದು ಬರಹ ಮತ್ತು ಇತರ ಚಟುವಟಿಕೆಗಳು ಸಮ ಸಮವಾಗಿ ನಡೆಯುತ್ತವೆ. ಕ್ರೀಡಾ ಕೂಟಗಳು ಮತ್ತು ಅಂತರ್-ಶಾಲಾ ಉತ್ಸವಗಳು, ಮಾದರಿ ವಿಶ್ವ ಸಂಸ್ಥೆ ಮತ್ತು ಚರ್ಚಾಕೂಟಗಳಲ್ಲಿ ಮಕ್ಕಳನ್ನು ವ್ಯಾಪಕವಾಗಿ ತೊಡಗಿಸಿಕೊಳ್ಳುವುದರಿಂದ ನಾವು "ದಡ್ಡ"ರಾಗುವ ಸಾಧ್ಯತೆಯೇ ಇಲ್ಲ. ನಮ್ಮ ಎಲ್ಲಾ ಪಠ್ಯಜನ್ಯ ಜ್ಞಾನವನ್ನು ಅನ್ವಯಿಸಲು ನಾವು ಸಮರ್ಥರಾಗದಿದ್ದಲ್ಲಿ, ನಾವು ಕಲಿತದ್ದೆಲ್ಲಾ ಸೊನ್ನೆಗೆ ಸಮಾನ.

ಬೆಳವಣಿಗೆ ಮತ್ತು ಕಲಿಕೆಯ ಜೊತೆ ಜೊತೆಗೆ ಹೊಣೆಗಾರಿಕೆಯನ್ನೂ ವಹಿಸಿಕೊಳ್ಳಬೇಕಾಗುತ್ತದೆ. ಶಾಲೆಯಲ್ಲಿ ಸಮಾರಂಭ ನಡೆಸುವ ಜವಾಬ್ದಾರಿ ಮಾದರಿ ವಿಶ್ವ ಸಂಸ್ಥೆ ಸಭೆ ನಡೆಸುವುದು ಮತ್ತು ವಿವಿಧ ಪ್ರದರ್ಶನಗಳನ್ನು ಶಾಲೆಯಲ್ಲಿ ಏರ್ಪಡಿಸುವುದು ಮುಂತಾದ ಈ ಜವಾಬ್ದಾರಿಯನ್ನು ನಿರ್ವಹಿಸುವ ಅವಕಾಶವನ್ನು ವಿದ್ಯಾನಿಕೇತನ್ ಶಾಲೆಯು ನಮಗೆ ನೀಡುತ್ತದೆ. ಇಂತಹ ಅವಕಾಶಗಳಿಂದಲೇ ನಮ್ಮ ಆತ್ಮವಿಶ್ವಾಸವು ವೃದ್ಧಿಸುವುದು. ಇಂಥ ಸಂದರ್ಭಗಳಿಂದಲೇ ನಮ್ಮ ಸೃಜನಶೀಲತೆ ಮತ್ತು ನಾಯಕತ್ವದ ಗುಣಗಳು ಪ್ರಕಟವಾಗುತ್ತವೆ. ಶಾಲಾ ಜೀವನದಲ್ಲಿ ಓದು ಮತ್ತಿತರ ಚಟುವಟಿಕೆಗಳಷ್ಟೇ ಮಹತ್ವವಾದದ್ದು ನಮ್ಮ ಸಹಪಾಠಿಗಳು ಮತ್ತು ಶಿಕ್ಷಕರ ಜೊತೆಯಲ್ಲಿನ ಒಡನಾಟ. ನಮ್ಮ ಕಷ್ಟಗಳನ್ನು ಹಂಚಿಕೊಳ್ಳಬಹುದಾದ ನಮ್ಮೊಡನೆ ಸುಲಭವಾಗಿ ಬೆರೆಯುವ ಶಿಕ್ಷಕರು ನಮ್ಮೊಡನೆ ಇದ್ದಾರೆ ಎನ್ನುವುದೇ ಮನಸನ್ನು ಹಗುರಗೊಳಿಸುತ್ತದೆ. ಬಹಳ ಸಲ ನಮ್ಮ ಹುಡುಗಾಟದ ಉನ್ಮಾದದಲ್ಲಿ ನಾವು ಎಷ್ಟೊಂದು ಮೈಮರೆಯುತ್ತೇವೆಂದರೆ, ನಾವು ನಮ್ಮ ಒಡನಾಡಿಗಳನ್ನು ಮರೆಯುತ್ತೇವೆ ಇಲ್ಲವೇ ಅವರನ್ನು ಹೇಗೆ ನಾವು ನಡೆಸಿಕೊಳ್ಳುತ್ತಿದ್ದೇವೆ ಎಂಬುದರ ಪರಿವೆಯೇ ನಮಗಿರುವುದಿಲ್ಲ.

ಹಂಚಿ ಬಾಳಿದರೆ ಸ್ವರ್ಗ ಸುಖ ಎಂಬ ಮೌಲ್ಯವು ವಿದ್ಯಾ ನಿಕೇತನದಲ್ಲಿ ಆಳವಾಗಿ ಬೇರೂರಿದೆ ನಮಗೆ ವಾರಕೊಮ್ಮೆ ನಮ್ಮ ಚಿಂತನೆಗಳನ್ನು ಹಂಚಿಕೊಳ್ಳುವ ತರಗತಿಗಳದ್ದು ಅಲ್ಲಿ ನಾವು ನಿರ್ಭಿಡೆಯಿಂದ ಮನದ ಮಾತನ್ನು ಹೇಳುತ್ತೇವೆ ಮತ್ತು ಇಡೀ ತರಗತಿಯು ಇತರರ ಮಾತುಗಳನ್ನು ಆಲಿಸಲು ತನ್ನ ಸಮಯವನ್ನು ವಿನಿಯೋಗಿಸುತ್ತದೆ. ನಮ್ಮನ್ನು ಚಿಂತನೆಗೆ ಹಚ್ಚಲು ಜೀವನ ಕೌಶಲ್ಯ ಶಿಕ್ಷಕಿಯು ತಪ್ಪದೇ ಬದುಕಿನ ಒಂದಿಲ್ಲೊಂದು ಹೊಸ ಆಯಾಮವ'ನ್ನು ನಮ್ಮ ಮುಂದೆ ತೆರೆದಿಡುತ್ತಿದ್ದರು. ಇಲ್ಲಿ ದಾದಾಗಿರಿ (bullying) ಮಂತಾದ ಸೂಕ್ಷ್ಮ ವಿಷಯಗಳನ್ನು ಬಗೆಹರಿಸುತ್ತಿದ್ದ ಮತ್ತು ಆಗಿಂದಾಗಲೇ ಅದನ್ನು ತಿದ್ದುತ್ತಿದ್ದ ರೀತಿಯಲ್ಲಿ ತೋರುತ್ತಿದ್ದ ಕಾಳಜಿ ಕಂಡು ನನ್ನ ಹೃದಯ ತುಂಬಿ ಬರುತ್ತಿತ್ತು. ಶಾಲೆಯೆಂದರೆ ನಾವು ವಿಷಯಗಳನ್ನು ಕಲಿಯುವ ಸ್ಥಳ ಹಾಗೆಯೇ ನಾವು ಪೂರ್ಣವಾಗಿ ಅರಳುವ ಸ್ಥಳವೂ ಹೌದು. ಅದು ನಮ್ಮ (ವೇಗವಾಗಿ ಆಗಮಿಸುತ್ತಿರುವ) ವಯಸ್ಕ ಜೀವನದಲ್ಲಿ ನಾವು ಏನಾಗಲಿರುವೆವು ಎಂಬುದನ್ನು ರೂಪಿಸುವ ಸ್ಥಳ. "ತರಗತಿ ಕೋಣೆಯು ಜಗತ್ತಿಗೆ ಒಂದು ಪ್ರವೇಶದ್ವಾರವಾಗಿರಬೇಕೇ ಹೊರತು ಅದರಿಂದ ತಪ್ಪಿಸಿ ಅಡಗಿಕೊಳ್ಳುವ ಸ್ಥಳ ಆಗಿರಬಾರದು" ಎಂದು ಜಾನ್ ಷಿಯಾರ್ಡಿ (John Ciardi) ಹೇಳಿದ್ದಾನೆ ಈ ಮಾತಿಗೆ ನನ್ನ ಪೂರ್ಣ ಸಹಮತವಿದೆ.

**ಅಂಕಿತ ಕೊಡವೂರ್** ಬೆಂಗಳೂರಿನ ವಿದ್ಯಾನಿಕೇತನ್ ಶಾಲೆಯ 11 ನೇ ತರಗತಿಯ ವಿದ್ಯಾರ್ಥಿನಿ.
ಅವರನ್ನು anki.kodavoor@gmail.com ನಲ್ಲಿ ಸಂಪರ್ಕಿಸಬಹುದು

